ಒ.ಎಸ್ ನಂ. **79/2022**
ಪಿ.ಡಬ್ಲ್ಯೂಃ **1**

ದಿನಾಂಕಃ **07-03-2026** ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಂದುವರೆದ ಪಾಟೀ ಸವಾಲುಃ 1 ನೇ ಪ್ರತಿವಾದಿಯ ಪರ ಶ್ರೀ ಎಸ್.ಎಂ ವಕೀಲರಿಂದಃ

8. ಸಂಪೂರ್ಣ ದಾವಾ ಜಮೀನು ಸಾಗುವಳಿ ಜಮೀನು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿರುವ ಚೆಕ್ ಬಂದಿ ಸ್ಥಾನಿಕವಾಗಿ ಸರಿ ಇರುವುದಿಲ್ಲ ಎಂದರೆ ಸರಿಯಲ್ಲ. ಅಲ್ಲಿ 1 ನೇ ಪ್ರತಿವಾದಿಯ ತಿಪ್ಪೆಗುಂಡಿ ಇದ್ದಾವೆ ಎಂದರೆ ಸರಿಯಲ್ಲ. ದಾವಾ ಜಮೀನು ಸಾಗುವಳಿ ಜಮೀನು ಆಗಿರುತ್ತದೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಜಮೀನು ನನ್ನ ತಾಯಿಗೆ ಅವರ ತಂದೆಯ ಕಡೆಯಿಂದ ಬಂದಿತ್ತು. ದಾವಾ ಜಮೀನು ನನ್ನ ತಾಯಿಗೆ ಅವರ ತಂದೆಯ ಕಡೆಯಿಂದ ಬಂದಿರುತ್ತದೆ ಎಂಬುದನ್ನು ತೋರಿಸಲು ದಾಖಲೆ ಹಾಜರು ಮಾಡಿದ್ದೇನೆ. ನಾನು ಆ ರೀತಿ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಗೆ ಅವರ ತಂದೆಯ ಕಡೆಯಿಂದ ಆಸ್ತಿ ಬಂದಿರುತ್ತದೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಪ್ರತಿವಾದಿ ದಾವಾ ಅಸ್ತಿಯಲ್ಲಿ ಮನೆ ಅಥವಾ ಗುಡಿಸಲು ಹಾಕಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಎರಡು ತಿಪ್ಪೆಗುಂಡಿ ಹಾಕಿ ಅದಕ್ಕೆ ಕಾಂಪೌಂಡ್ ಗೋಡೆ ಕಟ್ಟಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ಒಪ್ಪಿಗೆಯ ಮೇರೆಗೆ ಆತ ತಿಪ್ಪೆಗುಂಡಿ ಹಾಕಿ ಕಾಂಪೌಂಡ್ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನು ರೂ.1 ಲಕ್ಷ ಹಣ ಪಡೆದು 1 ನೇ ಪ್ರತಿವಾದಿಗೆ ತಿಪ್ಪೆಗುಂಡಿ ಹಾಕಲು ಒಪ್ಪಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪ್ರತಿಫಲದ ಹಣ ಪಡೆದು ದಿನಾಂಕ 27.07.2021 ರಂದು ನಾನು 1 ನೇ ಪ್ರತಿವಾದಿಗೆ ನೊಂದಾಯಿತವಲ್ಲದ ದಾಖಲೆ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ರೂ.5,200/- ಮೊತ್ತದ ಚಾಪಾ ಕಾಗದದ ಮೇಲೆ ಸದರಿ ದಾಖಲೆ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾಖಲೆಗೆ ನಮ್ಮ ಗ್ರಾಮದ ಬಸವರಾಜ ರವರು ಸಾಕ್ಷಿದಾರರಾಗಿರುತ್ತಾರೆ ಎಂದರೆ ಸರಿಯಲ್ಲ. ಮಲ್ಲಪ್ಪ ತಂದೆ ಬಂಗಾರಪ್ಪ ಎಂಬುವವರೂ ಸಹ ಸದರಿ ದಾಖಲೆಗೆ ಸಾಕ್ಷಿದಾರರಾಗಿರುತ್ತಾರೆ ಎಂದರೆ ಸರಿಯಲ್ಲ. ಅಲ್ಲದೇ ಮಲ್ಲಿಕಾರ್ಜುನ ತಂದೆ ಸಿದ್ದಲಿಂಗಪ್ಪ ರವರು ಸಹ ಸದರಿ ದಾಖಲೆಗೆ ಸಾಕ್ಷಿದಾರರಾಗಿರುತ್ತಾರೆ ಎಂದರೆ ಸರಿಯಲ್ಲ. ಬಂಗಾರಪ್ಪ ಕಲಾಸಿ ರವರು ಸಹ ಸದರಿ

ದಾಖಲೆಗೆ ಸಾಕ್ಷಿದಾರರಾಗಿರುತ್ತಾರೆ ಎಂದರೆ ಸರಿಯಲ್ಲ. ದೇವರಾಜ ಗೌಡ ರವರು ಸಹ ಸದರಿ ದಾಖಲೆಗೆ ಸಾಕ್ಷಿದಾರರಾಗಿರುತ್ತಾರೆ ಎಂದರೆ ಸರಿಯಲ್ಲ. ಖರೀದಿ ಮಾಡಿದಾಗಿನಿಂದ 1 ನೇ ಪ್ರತಿವಾದಿಯು ಸದರಿ ಜಾಗದಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

9. ಒಂದು ತಿಪ್ಪೆಗುಂಡಿಯ ಅಳತೆ 80x16 ಅಡಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ ತಿಪ್ಪೆಯ ಪೂರ್ವಕ್ಕೆ ನಿಮ್ಮ ಉಳಿದ ಜಮೀನು, ಪಶ್ಚಿಮಕ್ಕೆ ಯಲ್ಲಪ್ಪ ರವರ ಮನೆ, ಉತ್ತರ ಜಗ್ಗೆ ಮಲ್ಲಪ್ಪ ಹಾಗೂ ಹಣಮಂತ ರವರ ಮನೆ ಮತ್ತು ದಕ್ಷಿಣಕ್ಕೆ ಅರಕೇರಾದಿಂದ ಬಂಗಾರಮ್ಮ ರವರ ಶಾಲೆಗೆ ಹೋಗುವ ರಸ್ತೆ ಇದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

10. ಇನ್ನೊಂದು ತಿಪ್ಪೆಗುಂಡಿಯ ಅಳತೆ 34x18 ಅಡಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ ತಿಪ್ಪೆಯ ಪೂರ್ವ ಹಾಗೂ ಪಶ್ಚಿಮಕೆ ನಿಮ್ಮ ಉಳಿದ ಜಮೀನು, ಉತ್ತರಕ್ಕೆ ಅರಕೇರಾದಿಂದ ಬಂಗಾರಮ್ಮ ರವರ ಶಾಲೆಗೆ ಹೋಗುವ ರಸ್ತೆ ಹಾಗೂ ದಕ್ಷಿಣಕ್ಕೆ 1 ನೇ ಪ್ರತಿವಾದಿಯ ಮನೆ ಇರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಸದರಿ ಎರಡು ತಿಪ್ಪೆಯ ಜಾಗವನ್ನು 1 ನೇ ಪ್ರತಿವಾದಿಗೆ ಬರೆದುಕೊಟ್ಟು ಸಾಕ್ಷಿದಾರರ ಸಮಕ್ಷಮ ದಾಖಲೆಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಕಾನೂನಿನ ಪ್ರಕಾರ ತಿಪ್ಪೆಗುಂಡಿ ಹಾಕಿದ್ದಾರೆ ಎಂದರೆ ಸರಿಯಲ್ಲ. ನಾನು ಕಾನೂನಿನ ಪ್ರಕಾರ 1 ನೇ ಪ್ರತಿವಾದಿಗೆ ತಿಪ್ಪೆಗುಂಡಿಗೆ ಜಾಗ ಕೊಟ್ಟಿರುವುದರಿಂದ ನನಗೆ ಅದನ್ನು ಮರಳಿ ಪಡೆಯುವ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಕಾನೂನು ಬದ್ಧವಾಗಿ ತನ್ನ ತಿಪ್ಪೆಗುಂಡಿಗಳ ಕಬ್ಜೆ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ನನಗೆ ತಿಪ್ಪೆಗುಂಡಿಗಳ ಸ್ವಾಧೀನ ಪಡೆದುಕೊಳ್ಳುವ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಾನು ಕಾನೂನು ಬಾಹಿರವಾಗಿ ಸದರಿ ಜಾಗದ ಸ್ವಾಧೀನ ಪಡೆದುಕೊಳ್ಳಲು ಪ್ರಯತ್ನಿಸುತ್ತಿರುವುದರಿಂದ 1 ನೇ ಪ್ರತಿವಾದಿ ನನ್ನ ವಿರುದ್ಧ ಪ್ರತಿ ದಾವೆ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಪ್ರತಿ ದಾವೆಯ ಪರಿಹಾರ ಪಡೆದುಕೊಳ್ಳಲು ಅರ್ಹರಾಗಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಜಮೀನು ಸಾಗುವಳಿ ಭೂಮಿ ಆಗಿರುವುದಿಲ್ಲ, ಅದು ಸಂಪೂರ್ಣ ಮನೆ, ತಿಪ್ಪೆಗುಂಡಿ ಹಾಗೂ ಜೋಪಡಿಗಳಿಂದ ಕೂಡಿದೆ

ಎಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿಯಿಂದ ಸ್ವಾದೀನ ಪಡೆದುಕೊಳ್ಳಲು ಅಧಿಕಾರ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯ ಮಾಲಿಕ ಹಾಗೂ ಕಬ್ಜೆದಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ.

(2, 3 ಹಾಗೂ 5 ರಿಂದ 8 ನೇ ಪ್ರತಿವಾದಿಯರು ಮತ್ತು ಅವರ ಪರ ವಕೀಲರು ಗೈರು ಹಾಜರು ಇರುವುದರಿಂದ ಅವರ ಪರ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಗಿದೆ.)

ಮರು ವಿಚಾರಣೆಃ ಇಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ